A.—Sri H. K. VEERANNA GOWDH (Minister for Public Works) —

(*a*) No. Investigation surveys are in progress.

(*b*) Does not arise.

(*c*) Do

(*d*) Do

(*e*) 5.50 lakhs acres.

(*f*) The exact extent can be known after the surveys are completed.

Member's Representation.

Sri C. J. MUCKANNAPPA.—Sir, I sent a short notice question regarding medical probationers.

Mr. SPEAKER.—Such questions should not be raised on the floor of the House, If the Hon'ble Member feels that the short notice question is not reached, he may consult the office and then talk to me in my chambers.

Sri C. J. MUCKANNAPPA.—I have received a communication and that is why I am making a representation.

Mr. SPEAKER.—No representation. You Please come to my chambers and we will discuss about it.

BUDGET FOR 1958-59—DEMANDS FOR GRANTS

Demand No. 49—Community Development, etc.

63 B. Community Development Projects and National Extension Service and Local Development Works.

Mr. SPEAKER.—Motion moved:

"That a sum not exceeding Rs. 2,08,97,000 be granted to the Government to defray the charges which will come in course of payment during the year ending 31st day of March 1959, in respect of 'Community Development Projects, National Extension Service and Local Development Works'."

*ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಕುಂದಾಪೂರ). — ಸ್ವಾಮಿ, ಸಮಾಜ ವಿಕಾಸ ಕೇಂದ್ರದ ವಿಷಯದಲ್ಲಿ ಮಾತನಾಡಬೇಕಾದರೆ ಅತ್ಯಂತ ಜೇನರದಿಂದ ಕೆಲವು ಮಾತುಗಳನ್ನಾಡಬೇಕಾಗುತ್ತದೆ. ಸಮಾಜ ವಿಕಾಸವಾಗಬೇಕು, ಸಮಾಜ ಮೇಲ್ಮಟ್ಟಕ್ಕೆ ಬರಬೇಕು ಎಂಬ ವಿಷಯದಲ್ಲಿ ಯಾವ ತರ್ಕವೂ ಇರುವುದಿಲ್ಲ. ವಿರೋಧ ಪಕ್ಷದವರು ಸಮಾಜವಿಕಾಸವಾಗಬಾರದು, ಸಮಾಜ ಮೇಲ್ಮಟ್ಟಕ್ಕೆ ಬರಬಾರದು, ಈ ಬಗ್ಗೆ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚು ಮಾಡಬಾರದು ಎಂಬ ತರ್ಕವನ್ನು ಮಾಡುವುದಿಲ್ಲ. ಸರ್ಕಾರದವರು ಈ ವಿಷಯದಲ್ಲಿ ಸಂಪೂರ್ಣ ಅನುಭವ ಪಡೆಯಬೇಕು. ಸರ್ಕಾರದ ರೀತಿ ನೀತಿಗಳೇನೆಂಬುದನ್ನು ನೋಡಿದ್ದೇ ಆದರೆ, ಅನೇಕ ಧುರೀಣರು ಹಕ್ಕಿಗಳು ಆಕಾಶದ ಕಡೆಗೆ ಹಾರಿದ ಹಾಗೆ ನೆಲದಿಂದ ಎಷ್ಟೋ ಮೈಲಿ ಎತ್ತರದಲ್ಲಿ ಹಾರಾಡುತ್ತಿದ್ದಾರೆಂದು ನನಗೆ ಕಾಣುತ್ತದೆ. ಇದಕ್ಕೆ ನಮ್ಮಲ್ಲಿ ಹಿರಿಯರು ಒಂದು ಗಾದೆಯನ್ನು ಹೇಳುತ್ತಾರೆ. ಅದು ನನಗೆ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ "ನೀರು ಕುಡಿಯದಂಥವನಿಗೆ ಕಡುಬು ತೂರಿಸಿದ ಹಾಗೆ" ಎಂದು. ಹೀಗೆ ಮಾಡಿದರೆ ಏನಾಗುತ್ತದೆ ಅಂದರೆ, ಅವನಿಗೆ ಶ್ವಾಸವೇ ಮುಚ್ಚಿಕೊಂಡು ಸಾಯುವ ಗತಿ ಬರುತ್ತದೆ. ಮುಖ್ಯವಾಗಿ ಹಿಂದುಳಿದ ಜನ ಪ್ರಗತಿಯಾಗಬೇಕು, ಬಡತನ ನಿವಾರಣೆಯಾಗಬೇಕು, ಸಮಾಜದಲ್ಲಿ ಕ್ರಾಂತಿಯಾಗಬೇಕು. ಈ ರೀತಿಯಲ್ಲಿ ಬಹಳ ದೊಡ್ಡ ದೊಡ್ಡ ಶಬ್ದ, ದೊಡ್ಡ ದೊಡ್ಡ ಭಾಷಣಗಳನ್ನು ಕೇಳುತ್ತಿದ್ದೇವೆ. ಅನೇಕ ಜನ ಧುರೀಣರು ಹೊರಗಿನಿಂದ ಅಂದರೆ, ಅಮೇರಿಕಾ, ಇಂಗ್ಲೆಂಡ್, ಮುಂತಾದ ಕಡೆಗಳಿಂದ ಬಂದು ನಮ್ಮ ಸರ್ಕಾರಕ್ಕೆ ದೊಡ್ಡ ದೊಡ್ಡ ಸರ್ಟಿಫಿಕೇಟನ್ನು ಕೊಡುತ್ತಿದ್ದಾರೆ. ಹಿಂದೊಸ್ಥಾನದಲ್ಲಿ ಸಮಾಜ ವಿಕಾಸ ಕೇಂದ್ರ ಬಹಳ ಕ್ರಾಂತಿಕಾರಕವಾದುದು. ಇಡೀ ಭೂಲೋಕದಲ್ಲಿ ಮಾದರಿಯಾದುದು. ಇದು ನನಗೆ ಬಹಳ ಸಂತೋಷದ ಸಂಗತಿ. ನಮ್ಮ ದೇಶ ಇತರ ದೇಶಗಳಿಗೆ ಮಾದರಿಯಾದರೆ, ನಮ್ಮ ದೇಶ ಇತರರಿಗಿಂತ ಕೆಲವೇ ವರ್ಷಗಳಲ್ಲಿ ಸಂಪೂರ್ಣ ಪ್ರಗತಿಯನ್ನು ಹೊಂದಿದರೆ ಅದು ಯಾರಿಗೂ ಬೇಡವಾದ ಸಂಗತಿಯಲ್ಲ. ನಾನು ಹಳ್ಳಿಯವ. ನಾನು ಹಳ್ಳಿಯ ಅನುಭವವನ್ನು ಪಡೆದಿರುವವನು. ನಮ್ಮವರೆಲ್ಲಾ ಹಳ್ಳಿಯವರು. ಸ್ವಾತಂತ್ರ್ಯ ಬಂದು 11 ವರ್ಷಗಳಾದನಂತರ, ನಾವು ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಇವತ್ತು ಸಮಾಜ ವಿಕಾಸವೆಂದರೆ ಏನು ಎಂಬುದು ಗೊತ್ತಿಲ್ಲದೆ ಇರುವವರೇ ಶೇಕಡಾ 99 ಭಾಗ ಇದ್ದಾರೆ. ನಾನು ಅನೇಕ ಸಾರಿ ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್ ಮತ್ತು ನ್ಯಾಷನಲ್ ಎಕ್ಸ್‌ಟೆಷನ್ ಸರ್ವಿಸ್ ಕೆಲಸ ಕಾರ್ಯಗಳನ್ನು ನೋಡಿದ್ದೇನೆ. ಇದರಲ್ಲಿ ಅನುಭವ ಪಡೆದಂಥವರು ದೇಶಾದ್ಯಂತ ತಿರುಗಿ ಈ ವಿಷಯದಮೇಲೆ ಒಂದು ವರದಿಯನ್ನು ಬರೆದಿದ್ದಾರೆ. ಸರ್ಕಾರದವರು ಅದನ್ನು ಒಪ್ಪುತ್ತಾರೆ. ಸಮಾಜ ವಿಕಾಸವೆಂದರೇನು ಎಂಬುದೇ ಅನೇಕರಿಗೆ ಗೊತ್ತಿಲ್ಲ. ಇಲ್ಲಿ ಸರ್ಕಾರದವರು ಪ್ರಥಮದಲ್ಲಿ ಹೇಳುವಂತೆ ಕರ್ನ್ಜಕ್ಟಿವ್ ಅಪ್ರೋಚ್‌ನಲ್ಲಿ ಹೇಗೆ ಅದರ ಗುರಿಯನ್ನು ಮುಟ್ಟಬೇಕೋ ಆ ರೀತಿ ಗುರಿಯನ್ನು ಮುಟ್ಟಬೇಕೆಂದು ಹೇಳುವಾಗ "Supply of drinking water, improvement of agriculture and animal husbandry, co-operative activities, rural industries and health followed by all other activities" ಹೀಗೆ ಬಂದು ಇನ್ನುಳಿದುದೆಲ್ಲಾ ಕಡೆಗೆ ಬರಬೇಕು ಎಂದು ನನಗೆ ಕಾಣುತ್ತದೆ. ಸರ್ಕಾರದವರು ಇದುವರೆಗೆ ಹೇಳಿದ ವಿಷಯ ಯಾವ ರೀತಿಯಲ್ಲೂ ಬದಲಾವಣೆಯಾದ ಹಾಗೆ ಕಂಡು ಬರುವುದಿಲ್ಲ. ಅವರು ಹೇಳಿದ ವಿಷಯಗಳಲ್ಲಿ ಏನೂ ಒಳ್ಳೆಯದಾಗಲಿಲ್ಲ. ನಾನು ಅಧಿವೇಶನಕ್ಕೆ ಬರುವುದಕ್ಕೆ ಮುಂಚಿತವಾಗಿ ಕೆಲವು ಹಳ್ಳಿಗಳಿಗೆ ಹೋದಾಗ, ಕೆಲವು ಗ್ರಾಮ ಸೇವಕರು ಆ ಹಳ್ಳಿಗಳಲ್ಲಿ ತಿರುಗಾಡು